# ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

ದೂರವಾಣಿ : / Telephone: 08382 221170, 08382 221170 (Fax)

Email: itstaffdudckarwar@gmail.com


ನಂ. ಡಿಯುಡಿಸಿ /ವಿವ/ಕರಾವಳಿ ಉತ್ಸವ/2017-18

ದಿನಾಂಕ: 03-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

## ಇ-ಪ್ರೊಕ್ಯುರ್‌ಮೆಂಟ್ ಮೂಲಕ

ಯಾವತ್ತೂ ಹೋಟೆಲ್ ಮಾಲಕರಿಗೆ / ವ್ಯಾಪಾರಸ್ಥರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವೀಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯಲ್ಲಿ ಮತ್ತು ಜಿಲ್ಲಾ ರಂಗಮಂದಿರದಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ಡಿಸೆಂಬರ್ 2017 ರಂದು ನಡೆಸಲು ನಿರ್ಧರಿಸಲಾಗಿದೆ. ಸದರ ಉತ್ಸವಕ್ಕೆ ಭಾಗವಹಿಸುವ ಗಣ್ಯ ವ್ಯಕ್ತಿಗಳು / ಅತಿಥಿಗಳು / ಅಧಿಕಾರಿಗಳಿಗೆ ಟೆಂಡರ್ ಫಾರ್ಮದಲ್ಲಿ ತಿಳಿಸಿದಂತೆ ಊಟ, ತಿಂಡಿ, ನೀರು, ಇತ್ಯಾದಿ ವ್ಯವಸ್ಥೆ ಮಾಡಲು ಈ ಕೆಳಗಿನ ಶರತ್ತುಗಳಿಗೆ ಒಳಪಟ್ಟು ಇ-ಪ್ರೊಕ್ಯುರ್‌ಮೆಂಟ್ ಮೂಲಕ ಟೆಂಡರನ್ನು ಕರೆಯಲಾಗಿದೆ. ಆಸಕ್ತರು ತಮ್ಮ ದರವಾರವನ್ನು ದಿನಾಂಕ:22-11-2017 ರಂದು 16-00 ಗಂಟೆ ಒಳಗಡೆ ರೂ. 25,000/- ಮುಂಗಡ ಠೇವಣಿಯನ್ನು ಇ-ಪೇಮೆಂಟ್ ಮೂಲಕ ಪಾವತಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್- itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

**ಶರ್ತುಗಳು :**

1) ಸ್ವೀಕೃತವಾದ ದರವಾರುಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 23-11-2017 ರಂದು 17-00 ಗಂಟೆಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರದಲ್ಲಿ ತೆರೆಯಲಾಗುವುದು.
2) ಟೆಂಡರ್ ಮಂಜೂರಾದವರು ಸದರಿ ದಿನದ 24 ಗಂಟೆ (ಯಾವುದೇ ಸಮಯದಲ್ಲಿ) ಸಮಯದಲ್ಲಿ ಊಟ, ತಿಂಡಿ, ಚಹಾ, ಕಾಪಿ ಇತ್ಯಾದಿ ವ್ಯವಸ್ಥೆ ಮಾಡಿಕೊಡತಕ್ಕದ್ದು.
3) ಟೆಂಡರ್ ಪಡೆದವರು ಸರಬರಾಜು ಮಾಡುವ ಆಹಾರಗಳ ಸುರಕ್ಷತೆ ಮತ್ತು ಗುಣಮಟ್ಟದ ಆಹಾರವನ್ನು ಸರಬರಾಜು ಮಾಡದೇ ಇದ್ದಲ್ಲಿ ಅಂತವರ ಟೆಂಡರ್‌ನ್ನು ರದ್ದುಪಡಿಸಲಾಗುವುದು ಹಾಗೂ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಅಂತಹ ಸರಬರಾಜು ಮಾಡಿದ ಆಹಾರಕ್ಕೆ ಯಾವುದೇ ರೀತಿಯಲ್ಲಿ ಬಿಲ್ ಪಾವತಿ ಮಾಡಲು ಆಗುವುದಿಲ್ಲ.

4) ಟೆಂಡರ್ ಮಂಜೂರಿ ಪಡೆದವರು ಸಮವಸ್ತ್ರದಲ್ಲಿ ಸಿಬ್ಬಂದಿಗಳನ್ನು ನೇಮಿಸತಕ್ಕದ್ದು ಹಾಗೂ ಅವರುಗಳು ಸ್ವಚ್ಛತೆಯನ್ನು ಕಾಪಾಡಿಕೊಳ್ಳತಕ್ಕದ್ದು ಮತ್ತು ಆಹಾರ ಸರಬರಾಜು ಮಾಡುವ ಸ್ಥಳದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು.
5) ಈ ಮೇಲಿನ ತಿಂಡಿ ಮತ್ತು ಊಟದ ದರವು ಎಲ್ಲಾ ತೆರಿಗೆ ಸಮೇತ ನಿಗದಿತ ಸ್ಥಳದಲ್ಲಿ ಸರಬರಾಜು ಮಾಡುವ ಎಲ್ಲಾ ವೆಚ್ಚಗಳನ್ನು ಸೇರಿಸಿ ದರವಾರವನ್ನು ನೀಡುವುದು.
6) ಟೆಂಡರ್ ಫಾರ್ಮನಲ್ಲಿ ತಿಳಿಸಿದ ಪ್ರಮಾಣಗಳು ಅಂದಾಜು ಮಾಡಲ್ಪಟ್ಟಿದ್ದು ಹೆಚ್ಚು ಕಡಿಮೆ ಆದಲ್ಲಿ ಅದರಂತೆ ಪೂರೈಸಬೇಕು ಮತ್ತು ಮೆನು (ಊಟ ಮತ್ತು ತಿಂಡಿಗಳ ವಿವರ) ಬದಲಾವಣೆಗೆ ಸಹ ಬದ್ಧರಿರತಕ್ಕದ್ದು.
7) ಎಲ್ಲಾ ಸಮಯದಲ್ಲಿ 20 ಲೀಟರ್ ಕುಡಿಯುವ ನೀರಿನ ಕ್ಯಾನ್‌ಗಳನ್ನು & ಪೇಪರ್ ಕಪ್‌ಗಳಲ್ಲಿ ಇಡುವುದು. ಹಾಗೂ ವಿತರಿಸಲು ಅಗತ್ಯವಿರುವ ಸಿಬ್ಬಂದಿಗಳನ್ನು ನಿಲ್ಲಿಸುವುದು.
8) ಉಪಹಾರ & ಊಟ ಮಾಡಲು ಬರುವವರಿಗೆ ಟೋಕನ್ ನೀಡಲಾಗಿದ್ದು ಊಟ ವಿತರಿಸುವವರು ಟೋಕನ್ ಪಡೆದು ಆಹಾರ ನೀಡತಕ್ಕದ್ದು ಇದರ ಆಧಾರದ ಮೇಲೆಯೇ ಬಿಲ್ ಪಾವತಿಸಲಾಗುವುದು.
9) ಟೆಂಡರ್ ಪಡೆದವರು ಸರಬರಾಜು ಮಾಡುವ ಆಹಾರಗಳ ಸುರಕ್ಷತೆ ಮತ್ತು ಗುಣಮಟ್ಟದ ಆಹಾರವನ್ನು ಸರಬರಾಜು ಮಾಡದೇ ಇದ್ದಲ್ಲಿ ಅಂತವರ ಟೆಂಡರ್‌ನ್ನು ರದ್ದುಪಡಿಸಲಾಗುವುದು ಹಾಗೂ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಅಂತಹ ಸರಬರಾಜು ಮಾಡಿದ ಆಹಾರಕ್ಕೆ ಯಾವುದೇ ರೀತಿಯಲ್ಲಿ ಬಿಲ್ ಪಾವತಿ ಮಾಡಲು ಆಗುವುದಿಲ್ಲ.
10) ಗಣ್ಯವ್ಯಕ್ತಿಗಳು/ಅತಿಥಿಗಳು/ ಅಧಿಕಾರಿಗಳಿಗೆ ಊಟ, ತಿಂಡಿ ಬಡಿಸಲು ಅವಶ್ಯಕವಿರುವ ಖುರ್ಚಿ, ಟೇಬಲ್, ಜನರೇಟರ್ ಸಮೇತ ಲೈಟ್ ವ್ಯವಸ್ಥೆ, ಶಾಮಿಯಾನ್, ಪ್ಲೇಟಗಳು, ಪೇಪರ್ ಗ್ಲಾಸ್‌ಗಳು, ಟಿಶ್ಯೂ ಪೇಪರ್‌ಗಳು ಹಾಗೂ ಸಮಿತಿಯವರು ಸೂಚಿಸಿದ ಸ್ಥಳದಲ್ಲಿ ಸಾಗಾಣಿಕೆ ಸೇರಿದಂತೆ ದರಗಳನ್ನು ನೀಡುವುದು.
11) ಈ ಟೆಂಡರ್ ಸಂಬಂಧ ಜಿಲ್ಲಾಧಿಕಾರಿಗಳು ಕೈಗೊಳ್ಳುವ ನಿರ್ಣಯ ಅಂತಿಮವಾಗಿರುತ್ತದೆ. ಅದನ್ನು ಪ್ರಶ್ನಿಸುವ ಅಧಿಕಾರಿ ಯಾರಿಗೂ ಇರುವುದಿಲ್ಲ.
12) ಟೆಂಡರ್‌ದಾರರು ಸಲ್ಲಿಸುವ ದರವಾರವು ಎಲ್ಲಾ ತೆರಿಗೆ ಮತ್ತು ಕರ ಸೇರಿಸಿ ನೀಡತಕ್ಕದ್ದು.

3/11/17

ಅಧ್ಯಕ್ಷರು
ಟೆಂಡರ್ ಸಮಿತಿ ಕರಾವಳಿ ಉತ್ಸವ – 2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ
ಉತ್ತರ ಕನ್ನಡ, ಕಾರವಾರ